O.S. No. 18/2021
DW. - 1

**ದಿನಾಂಕಃ 13-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು : ವಾದಿ ಪರವಾಗಿ ಶ್ರೀ ಕೆ ಎಸ್ ಆರ್ ಕೆ ವಕೀಲರಿಂದ**

ನಾನು 10 ನೇ ತರಗತಿ ಶಿಕ್ಷಣ ಮುಗಿಸಿರುತ್ತೇನೆ. ನಾನು 2016 ನೇ ಇಸವಿಯಲ್ಲಿ ಕಲ್ಲೂರು ನಲ್ಲಿ ಜಿಲ್ಲಾ ಪಂಚಾಯಿತಿ ಚುನಾವಣೆಗೆ ನಿಂತಿದ್ದೆ. ಆ ಚುನಾವಣೆಯಲ್ಲಿ ನಾನು ಸುಮಾರು ರೂ. 30,00,000/- ಖರ್ಚು ಮಾಡಿದ್ದೇನೆ. ನಾನು 1989 ಸಾಲಿನಿಂದ ಸಕ್ರೀಯ ರಾಜಕರಣದಲ್ಲಿ ಇರುತ್ತೇನೆ. ನಾನು ಸಕ್ರೀಯ ರಾಜಕೀಯಕ್ಕೆ ಬಂದಾಗಿನಿಂದ ಇಲ್ಲಿಯವರೆಗೆ ರಾಜಕೀಯ ಬಿಟ್ಟು ಬೇರೆ ಯಾವುದೇ ಉದ್ಯೋಗ ಮಾಡುತ್ತಿಲ್ಲ. ಈ ದಾವೆ ಸಲ್ಲಿಸಿದಾಗಿನಿಂದ ನಾನು ಯಾವುದೇ ದಾವಾ ಆಸ್ತಿ ಮಾರಾಟ ಮಾಡಲು ಪ್ರಯತ್ನ ಮಾಡಿರುವುದಿಲ್ಲ. ಜನತಾ ಪ್ರಿಂಟಿಂಗ್ ಪ್ರೆಸ್ ನ ಮಾಲೀಕರಾದ ಗೌಡಪ್ಪ ಇವರಿಗೆ ನಾನು ದಾವಾ ಆಸ್ತಿ ಮಾರಾಟ ಮಾಡುತ್ತೇನೆಂದು ಅವರಿಂದ ಪಡೆದ ಮುಂಗಡ ರೂ.10,00,000/- ಗಳನ್ನು ಮರಳಿ ಅವರಿಗೆ ಕೊಟ್ಟಿರುತ್ತೇನೆ, ಆದರೆ ದಾವಾ ಆಸ್ತಿ ಅವರಿಗೆ ಮಾರಾಟ ಮಾಡಿರುವುದಿಲ್ಲ.

ವಾದಿ ಪರ ವಕೀಲರು ಸಾಕ್ಷಿಗೆ ಮುಖ್ಯ ವಿಚಾರಣೆಯ 6 ನೇ ಕಂಡಿಕೆಯಲ್ಲಿ ಏನು ಬರೆದಿದೆ ಗೊತ್ತಿದೆಯ ಎಂದು ಪ್ರಶ್ನೆ ಕೇಳಿರುತ್ತಾರೆ, ಈ ಪ್ರಶ್ನೆಗೆ ಪ್ರತಿವಾದಿ ಪರ ವಕೀಲರು ಕಂಡಿಕೆ ಸಂಖ್ಯೆ ಆಧಾರದ ಮೇಲೆ ಪ್ರಶ್ನೆಗಳನ್ನು ಕೇಳಲು ಬರುವುದಿಲ್ಲ ಎಂದು ತಕರಾರು ಮಾಡಿರುತ್ತಾರೆ, ಸದರಿ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿರುವುದಿಲ್ಲ ಎಂದು ಉತ್ತರ ಹೇಳಿರುತ್ತಾರೆ.

ಸರ್ವೇ ನಂ.153, 1050, 1350, 1069, 154, 190 ಮತ್ತು 191 ಯಾವ ಆಧಾರದ ಮೇಲೆ ಮತ್ತು ಯಾರ ಹೆಸರಿಗೆ ಮ್ಯುಟೇಷನ್ ಎನ್ನುವ ಪ್ರಶ್ನೆಗೆ ಸಾಕ್ಷಿಯು 1969 ರಲ್ಲಿ ನಮ್ಮ ತಂದೆ ಹಾಗೂ ಹಿರಿಯರ ಸಮಕ್ಷಮ ನನ್ನ ಮತ್ತು ನನ್ನ ಅಣ್ಣನ ನಡುವೆ ಪಾಲು ವಿಭಾಗ ಆಗಿದೆ,

ಸರ್ವೇ ನಂ.1069, 1350, 190, ಜಮೀನುಗಳು ನನ್ನ ಭಾಗಕ್ಕೆ ಬಂದಿವೆ. ಸರ್ವೇ ನಂ.154 ನಮ್ಮ ತಂದೆಯ ಭಾಗಕ್ಕೆ ಬಂದಿದೆ. ಸಾಕ್ಷಿ ಮುಂದುವರೆದು ಸರ್ವೇ ನಂ.154 ನಮ್ಮ ಅಕ್ಕನಾದ ಗಿರಿಜಮ್ಮ (ಪ್ರತಿವಾದಿ-5) ಇವರ ಭಾಗಕ್ಕೆ ಬಂದಿದೆ. ಸರ್ವೇ ನಂ.1050, 190 ಜಮೀನುಗಳನ್ನು ನಮ್ಮ ಅಕ್ಕನಾದ (ಪ್ರತಿವಾದಿ-6) ಇವರ ಭಾಗಕ್ಕೆ ಬಂದಿದೆ ಎಂದು ಉತ್ತರ ಹೇಳಿರುತ್ತಾರೆ. ಸದರಿ ಸರ್ವೇ ನಂಬರ್ ಗಳ ದಾಖಲೆಗಳಲ್ಲಿ ಮೌಖಿಕ ಅಥವಾ ಲಿಖಿತ ರೂಪದಲ್ಲಿ ವಿಭಾಗ ಆಗಿದೆ ಎಂದು ಮ್ಯೂಟೇಷನ್ ಗಳಲ್ಲಿ ನಮೂದು ಆಗಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಮೌಖಿಕ ರೂಪದಲ್ಲಿ ಪಾಲು ಭಾಗ ಆಗಿದೆ ಎಂದು ಹೇಳುತ್ತಾರೆ. ಮೌಖಿಕ ರೂಪದಲ್ಲಿ ಪಾಲು ವಿಭಾಗ ಆಗಿಲ್ಲ ಅದೇ ಕಾರಣಕ್ಕೆ ಮೌಖಿಕ ರೂಪದಲ್ಲಿ ವಿಭಾಗ ಆಗಿದೆ ಎಂದು ದಾವಾ ಆಸ್ತಿಯ ಮ್ಯುಟೇಷನ್ ದಾಖಲೆಗಳಲ್ಲಿ ನಮೂದಿಸಿಲ್ಲ ಎಂದರೆ ಸರಿ.

ಭೀಮವ್ವ, ನೀಲಮ್ಮ ಮತ್ತು ಶರಣಮ್ಮ ನಮ್ಮ ಅಕ್ಕಂದಿರಿರುತ್ತಾರೆ. ದಾವಾ ಆಸ್ತಿ ಮ್ಯುಟೇಷನ್ ಆಗುವಾಗ ಭೀಮವ್ವ, ನೀಲಮ್ಮ ಮತ್ತು ಶರಣಮ್ಮ ರವರು ಇದ್ದರು. ಆವರಿಗೆ ಕೊಡಬೇಕಾದ ಪ್ರತಿಯೊಬ್ಬರಿಗೂ ಒಂದೊಂದು ಸೇರು ಬಂಗಾರ ಕೊಟ್ಟಿರುತ್ತೇವೆ, ಆದರೆ ಅವರ ಮದುವೆ ಮೊದಲೇ ಆಗಿತ್ತು. ಭೀಮವ್ವ, ನೀಲಮ್ಮ ಮತ್ತು ಶರಣಮ್ಮ ರವರಿಗೆ ಮ್ಯುಟೇಷನ್ ಆಗುವಾಗ ಒಂದೊಂದು ಸೇರು ಬಂಗಾರ ಕೊಟ್ಟಿದ್ದೇವೆ ಎಂದು ನಮ್ಮ ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದೇನೋ ಇಲ್ಲವೊ ಎಂದು ನನಗೆ ನೆನಪಿರುವುದಿಲ್ಲ. ಯಾವುದೇ ರೀತಿ ಮೌಖಿಕ ವಿಭಾಗ ಆಗಿಲ್ಲ ಮತ್ತು ನಮ್ಮ ಅಕ್ಕಂದಿರಾದ ಭೀಮವ್ವ, ನೀಲಮ್ಮ ಮತ್ತು ಶರಣಮ್ಮ ಇವರಿಗೆ ಒಂದೊಂದು ಸೇರು ಬಂಗಾರ ಕೊಟ್ಟಿಲ್ಲ ಆದ್ದರಿಂದ ಅದನ್ನು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದರ ಬಗ್ಗೆ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ.

O.S. No. 18/2021
DW. - 1

ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿ ಮತ್ತು ಅವರ ಪರ ವಕೀಲರು ನೋಡಿ ತಿಳಿದುಕೊಂಡಿರುತ್ತಾರೆ.)

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**